# ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ., ರವರ ನ್ಯಾಯಾಲಯ, ಕನಕಪುರ

## ಸಿಸಿ ನಂ.615/2014

| | | | |
|---|---|---|---|
| ಚಾಸಾ | **10** | ಪ್ರಾಸಾ | **5** |
| ಹೆಸರು | | ಎ ಪಿ ಕುಮಾರ್ | |
| ತಂದೆಯ ಹೆಸರು | | ಪುಟ್ಟಸ್ವಾಮಚಾರಿ | |
| ವಯಸ್ಸು | | **51**ವರ್ಷಗಳು | |
| ಉದ್ಯೋಗ | | ಪಿ.ಐ ಬಿಡಿಐ | |
| ವಿಳಾಸ | | ಬೆಂಗಳೂರು | |

ದಿನಾಂಕ**.30.08.2025**ರಂದು ಸಾಕ್ಷಿಗೆ ಪ್ರಮಾಣ ವಚನ ಬೋದಿಸಲಾಯಿತು**.**

**ಮುಖ್ಯವಿಚಾರಣೆ ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದಃ-**

ನಾನು ದಿನಾಂಕ**.10.09.2012** ರಿಂದ **23.06.2014**ರ ವರೆಗೆ ಹಾರೋಹಳ್ಳಿ ಪೊಲೀಸ್ ಠಾಣೆಯಲ್ಲಿ ಪಿಎಸ್ಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ**.**

ದಿನಾಂಕ**.23.11.2013**ರಂದು ನಾನು ಈ ಪ್ರಕರಣದ ಕಡತವನ್ನು ಚಾಸಾ**-8** ರವರಿಂದ ಪಡೆದುಕೊಂಡು ಮುಂದುವರೆದ ತನಿಖೆಯನ್ನು ಕೈಗೊಂಡಿರುತ್ತೇನೆ**.** ದಿನಾಂಕ**.23.11.2013**ರಂದು ಚಾಸಾ**-2** ರವರಿಗೆ ಸಂಬಂಧಿಸಿದ ಗಾಯದ ಪ್ರಮಾಣ

ಪತ್ರವನ್ನು ಚಾಸಾ-7 ರವರಿಂದ ಪಡೆದುಕೊಂಡು ಕಡತಕ್ಕೆ ಸೇರಿಸಿಕೊಂಡಿರುತ್ತೇನೆ. ದಿನಾಂಕ.24.11.2013ರಂದು ಕೃತ್ಯ ಸ್ಥಳಕ್ಕೆ ಭೇಟಿ ನೀಡಿ ಚಾಸಾ-1 ರವರು ತೋರಿಸಿದ ಸ್ಥಳದಲ್ಲಿ ಚಾಸಾ-4 ಮತ್ತು ಚಾಸಾ-6 ರವರ ಸಮಕ್ಷಮ ಬೆಳಿಗ್ಗೆ 10.30 ರಿಂದ 11.00 ಗಂಟೆ ಯ ವರೆಗೆ ಸ್ಥಳ ಪಂಚನಾಮೆ ಮಾಡಿ ಅದಕ್ಕೆ ಸಂಬಂಧಿಸಿದಂತೆ ಮಹಜರ್ ತಯಾರಿಸಿರುತ್ತೇನೆ. ಸ್ಥಳ ಪಂಚನಾಮೆ ಕಾಲದಲ್ಲಿ ಆರೋಪಿತರು ಚಾಸಾ-2 ರವರಿಗೆ ಹೊಡೆಯಲು ಬಳಸಿದ ಒಂದು ಮೂರು ಮುಕ್ಕಾಲು ಅಡಿ ಕಬ್ಬಿಣದ ರಾಡನ್ನು ಪಂಚರ ಸಮಕ್ಷಮ ಅಮಾನತ್ತುಪಡಿಸಿಕೊಂಡಿರುತ್ತೇನೆ. ಅಮಾನತ್ತು ಪಡಿಸಿಕೊಂಡ ಕಬ್ಬಿಣದ ರಾಡನ್ನು ನಮ್ಮ ಠಾಣಾ ಮಾಲುಪಟ್ಟಿಯಲ್ಲಿ ಸೇರಿಸಿಕೊಂಡು ನ್ಯಾಯಾಲಯಕ್ಕೆ ಸಲ್ಲಿಸಿಕೊಂಡಿರುತ್ತೇನೆ.

ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಲಾಗಿ ಸಾಕ್ಷಿಯು ಅದನ್ನು ನೋಡಿ ಗುರುತಿಸಿರುತ್ತಾರೆ, ಸಾಕ್ಷಿಯು ಗುರುತಿಸಿದ ದಾಖಲೆಯು ಸ್ದಳ ಮತ್ತು ಅಮಾನತು ಮಹಜರ್ ಆಗಿದ್ದು ಅದನ್ನು ಈಗಾಗಲೇ ನಿಪಿ-2 ಎಂದು ಗುರುತಿಸಲಾಗಿದ್ದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-2(ಡಿ) ಎಂದು ಗುರುತಿಸಲಾಯಿತು.

ಸಾಕ್ಷಿಗೆ ಇನ್ನೊಂದು ದಾಖಲೆಯನ್ನು ತೋರಿಸಲಾಗಿ ಸಾಕ್ಷಿಯು ಅದನ್ನು ನೋಡಿ ಗುರುತಿಸಿರುತ್ತಾರೆ, ಸಾಕ್ಷಿಯು ಗುರುತಿಸಿದ ದಾಖಲೆಯು ಚಾಸಾ-2 ರವರಿಗೆ ಸಂಬಂಧಿಸಿದ ಗಾಯದ ಪ್ರಮಾಣ ಪತ್ರವಾಗಿದ್ದು, ಅದನ್ನು ನಿಪಿ-3 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-3(ಎ) ಎಂದು ಗುರುತಿಸಲಾಯಿತು.

ದಿನಾಂಕ.**24.11.2013**ರಂದು ಚಾಸಾ-**2** ರವರ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ. ನಂತರ ಚಾಸಾ-**3** ರಿಂದ ಚಾಸಾ-**5** ರವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ. ಆದೇ ದಿನ ಚಾಸಾ-**1** ರವರ ಮುಂದುವರೆದ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ.

ದಿನಾಂಕ.**02.12.2013**ರಂದು ಈ ಪ್ರಕರಣದ ಮುಂದಿನ ತನಿಖೆಗಾಗಿ ಕಡತವನ್ನು ಚಾಸಾ-**9** ರವರಿಗೆ ವಹಿಸಿಕೊಟ್ಟಿರುತ್ತೇನೆ. ಆದೇ ದಿನ ಆರೋಪಿತರು ಚಾಸಾ-**9** ರವರ ಠಾಣೆಗೆ ಹಾಜರಾದ ಮೇರೆಗೆ ಅವರನ್ನು ವಿಚಾರಿಸಿ ದಸ್ತಗಿರಿ ಕ್ರಮ ಕೈಗೊಂಡು ಚಾಸಾ-**9** ರವರೇ ಅವರನ್ನು ಸೂಕ್ತ ಜಾಮೀನಿನ ಮೇರೆಗೆ ಬಿಡುಗಡೆ ಮಾಡಿರುತ್ತಾರೆ.

ದಿನಾಂಕ.**06.12.2013**ರಂದು ಚಾಸಾ-**9** ರವರಿಂದ ಈ ಪ್ರಕರಣದ ಕಡತವನ್ನು ಪುನಃ ಪಡೆದುಕೊಂಡು ದಾಖಲೆಗಳನ್ನು ಪರಿಶೀಲಿಸಿ ಆರೋಪಿಗಳ ವಿರುದ್ದ ಆಪರಾದ ಸಾಬೀತಾದ ಕಾರಣಕ್ಕೆ ಅವರ ವಿರುದ್ದ ದೋಷರೋಪಣ ಪಟ್ಟಿಯನ್ನು ಸಲ್ಲಿಸಿರುತ್ತೇನೆ. ಆರೋಪಿಯಾದ ಚನ್ನಮ್ಮ ರವರ ವಿರುದ್ದ ಯಾವುದೇ ಆಪರಾಧ ಸಾಬೀತಾಗದೆ ಇರುವ ಕಾರಣಕ್ಕೆ ಅವರ ವಿರುದ್ದ ಪ್ರಕರಣವನ್ನು ಕೈಬಿಟ್ಟಿರುತ್ತೇನೆ.

ದಿನಾಂಕ.**23.11.2013**ರಂದು ಸಂಜೆ **6.30**ಕ್ಕೆ ಚಾಸಾ-**1** ರವರು ಠಾಣೆಗೆ ಹಾಜರಾಗಿ ನೀಡಿದ ಲಿಖಿತ ದೂರನ್ನು ಚಾಸಾ-**8** ರವರು ಸ್ವೀಕರಿಸಿ ಅದರ ಆಧಾರದ ಮೇಲೆ ಅವರು ನಮ್ಮ ಠಾಣಾ ಗುನ್ನ ನಂ.**467/2013**ರಲ್ಲಿ ಪ್ರಕರಣವನ್ನು ದಾಖಲಿಸಿಕೊಂಡು

ಪ್ರ.ವ.ವರದಿಯನ್ನು ಮಾನ್ಯ ನ್ಯಾಯಾಲಯಕ್ಕೆ ಮತ್ತು ಮೇಲಾಧಿಕಾರಿಗಳಿಗೆ ನಿವೇದಿಸಿಕೊಂಡಿರುತ್ತಾರೆ.

ಚಾಸಾ-**8** ರವರು ಸ್ವೀಕರಿಸಿದ ದೂರನ್ನು ಮತ್ತು ಅವರು ದಾಖಲಿಸಿದ ಪ್ರಥಮ ವರ್ತಮಾನ ವರದಿಯನ್ನು ನಾನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ಕಡತದಲ್ಲಿರುವ ದೂರು ಮತ್ತು ಪ್ರಥಮ ವರ್ತಮಾನ ವರದಿಯನ್ನು ನೋಡಿ ಗುರುತಿಸಿರುತ್ತಾರೆ, ಸಾಕ್ಷಿಯು ಗುರುತಿಸಿದ ದೂರನ್ನು ಈಗಾಗಲೇ ನಿಪಿ-**1** ಎಂದು ಗುರುತಿಸಲಾಗಿರುತ್ತದೆ ಮತ್ತು ಪ್ರಥಮ ವರ್ತಮಾನ ವರದಿಯನ್ನು ನಿಪಿ-**4** ಎಂದು ಗುರುತಿಸಲಾಯಿತು.

<u>ಪಾಟೀ ಸವಾಲುಃ- ಆರೋಪಿತರ ಪರ ವಕೀಲರಾದ ಶ್ರೀ ಸಿಎಂಜೆ ರವರಿಂದಃ-</u>

ನಿಪಿ-**4**ರಲ್ಲಿ ಕೃತ್ಯ ನಡೆದ ದಿನಾಂಕವನ್ನು ಏನೆಂದು ನಮೂದು ಮಾಡಲಾಗಿರುತ್ತದೆ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು ಅದರಲ್ಲಿ ಕೃತ್ಯ ನಡೆದ ದಿನಾಂಕವನ್ನು **04.06.2013** ಎಂದು ನಮೂದಿಸಲಾಗಿರುತ್ತದೆ ಎಂದು ನುಡಿಯುತ್ತಾರೆ. ನಿಪಿ-**1**ರಲ್ಲಿಯು ಸಹ ಕೃತ್ಯ ನಡೆದ ದಿನಾಂಕವನ್ನು ದಿ.**04.06.2013**ರಂದು ಬರೆಯಲಾಗಿರುತ್ತದೆ ಎಂದರೆ ಸರಿ. ಕೃತ್ಯ ನಡೆದ ಐದು ತಿಂಗಳ ನಂತರ ಆ ಬಗ್ಗೆ ನಮ್ಮ ಠಾಣೆಯಲ್ಲಿ ದೂರು ನೀಡಲಾಗಿರುತ್ತದೆ ಎಂದರೆ ಸರಿ. ಐದು ತಿಂಗಳು ವಿಳಂಬವಾಗಿ ದೂರು ದಾಖಲಿಸಲು ಇರುವ ಕಾರಣಗಳನ್ನು ನಿಪಿ-**1**ರಲ್ಲಿ ನಮೂದಿಸಿಲ್ಲ ಎಂದರೆ ಸರಿಯಲ್ಲ.

ಆರೋಪಿ ಇರುವಂತಹ ಮನೆ ಮತ್ತು ಅವರ ಮನೆಯ ಹಿಂದೆ ಇರುವ ಹಿತ್ತಳಿಗೆ ಸಂಬಂಧಿಸಿದಂತೆ ಆರೋಪಿತರು ಮತ್ತು ಚಾಸಾ-1 ರವರ ನಡುವೆ ವ್ಯಾಜ್ಯ ಇದೆ ಎಂದರೆ ಸರಿ. ಈ ಬಗ್ಗೆ ಅವರ ನಡುವೆ ಸಿವಿಲ್ ದಾವೆ ನಡೆಯುತ್ತಿದೆ ಎಂದರೆ ಸರಿ. ಚಾಸಾ-1 ಮತ್ತು ಆರೋಪಿಗಳ ನಡುವೆ ದ್ವೇಷವಿದ್ದ ಕಾರಣಕ್ಕೆ ಐದು ತಿಂಗಳ ನಂತರ ಈ ಸುಳ್ಳು ದೂರನ್ನು ದಾಖಲಿಸಿರುತ್ತಾರೆ ಎಂದರೆ ಸರಿಯಲ್ಲ. ನಾನು ದೂರಿನ ಆಧಾರದ ಮೇಲೆ ಯಾವುದೇ ಪ್ರಾಥಮಿಕ ತನಿಖೆ ಮಾಡದೆ ಆರೋಪಿಗಳ ವಿರುದ್ದ ಚಾಸಾ-1 ರವರಿಗೆ ಸಹಾಯ ಮಾಡಲು ಸುಳ್ಳು ಕೇಸನ್ನು ದಾಖಲಿಸಿ ಸುಳ್ಳು ದೋಷರೋಪಣ ಪಟ್ಟಿ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

ಘಟನೆ ನಡೆದ ಐದು ತಿಂಗಳ ನಂತರ ನಾನು ಮಹಜರ್ ಗಾಗಿ ಸ್ಥಳಕ್ಕೆ ಹೋಗಿರುತ್ತೇನೆ ಎಂದರೆ ಸರಿ. ಕಬ್ಬಿಣದ ರಾಡನ್ನು ಆ ದಿನ ಚಾಸಾ-1 ರವರು ತಮ್ಮ ಮನೆಯಿಂದ ತಂದುಕೊಟ್ಟಿರುತ್ತಾರೆ. ಸದರಿ ಕಬ್ಬಿಣದ ರಾಡನ್ನು ಕೃತ್ಯಕ್ಕಾಗಿ ಆರೋಪಿತರು ಬಳಸದೆ ಇದ್ದರು ಚಾಸಾ-1 ರವರು ತಮ್ಮ ಮನೆಯಲ್ಲಿದ್ದ ಕಬ್ಬಿಣದ ರಾಡನ್ನು ನನಗೆ ಈ ಪ್ರಕರಣಕ್ಕೆ ಸಹಾಯವಾಗಲೀ ಎಂದು ತಂದು ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ನಿಪಿ-2ನ್ನು ನಾನು ಸ್ಥಳದಲ್ಲಿ ತಯಾರಿಸಿಲ್ಲ ಎಂದರೆ ಸರಿಯಲ್ಲ. ನಿಪಿ-2ನ್ನು ಈ ಪ್ರಕರಣಕ್ಕೆ ಅನುಕೂಲವಾಗಲಿ ಎಂದು ಪೊಲೀಸ್ ಠಾಣೆಯಲ್ಲಿ ತಯಾರಿಸಿ ಪಂಚರ ಮತ್ತು ಚಾಸಾ-1 ರವರ ಸಹಿಗಳನ್ನು ಠಾಣೆಯಲ್ಲಿ ಪಡೆದುಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಚಾಸಾ-1 ರಿಂದ 5 ರವರು ನನ್ನ ಸಮಕ್ಷಮ ಯಾವುದೇ ಹೇಳಿಕೆಗಳನ್ನು ಕೊಟ್ಟಿಲ್ಲ ಎಂದರೆ ಸರಿಯಲ್ಲ. ಆರೋಪಿತರು ಯಾವುದೇ ಅಪರಾಧ ಎಸಗಿಲ್ಲ ಎಂಬ ಸಂಗತಿಯು ತನಿಖಾ ಕಾಲದಲ್ಲಿ ಸಾಬೀತಾಗಿದ್ದರೂ ಸಹ ಚಾಸಾ-1 ಮತ್ತು 2 ರವರಿಗೆ ಸಹಾಯ ಮಾಡಲು ಅವರ ವಿರುದ್ದ ಸುಳ್ಳು

ದೋಷರೋಪಣ ಪಟ್ಟಿ ಸಲ್ಲಿಸಿ ಅದಕ್ಕೆ ಅನುಗುಣವಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ-**3**ನ್ನು ಈ ಪ್ರಕರಣಕ್ಕಾಗಿಯೇ ಚಾಸಾ-**7** ರವರೊಂದಿಗೆ ಶ್ಯಾಮಿಲಾಗಿ ಸೃಷ್ಟಿಸಿಕೊಂಡಿರುತ್ತೇವೆ ಎಂದರೆ ಸರಿಯಲ್ಲ.

<u>ಮರುವಿಚಾರಣೆ:- ಇಲ್ಲ</u>

(ಸಾಕ್ಷಿಯ ವಿಚಾರಣೆಯನ್ನು ನಾನು ತೆರೆದ ನ್ಯಾಯಾಲಯದಲ್ಲಿ ಪಡೆದುಕೊಂಡಿರುತ್ತೇನೆ ಎಂದು ದೃಢೀಕರಿಸುತ್ತೇನೆ.)

**ಓ ಹೇ ಕೇ ಸರಿ ಇದೆ,**

**(ರಾಧ.ಎಸ್)**
**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ, ಕನಕಪುರ.**